# ಒಲ್ಲನೋ ಹರಿ ಕೊಳ್ಳನೋ ಎಲ್ಲ ಸಾಧನವಿದ್ದು

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** The wording in Ref. 2 are almost similar to Ref. 1 except few differences, which are marked in yellow highlights.
4. **Note:** The wordings are as per Ref. 1 above (given without highlights). The wordings in Ref. 2 and that of the singer are matching.

ರಾಗ : ಕಲ್ಯಾಣಿ ತಾಳ : ಛಾಪು

ಒಲ್ಲನೋ ಹರಿ ಕೊಳ್ಳನೋ
ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ ‖ ಪ ‖

ಸಿಂಧು (ಸಾಗರಕೋಟಿ) (ಶತಕೋಟಿ) ಗಂಗೋದಕವಿದ್ದು
ಗಂಧ ಸುಪರಿಮಳ ವಸ್ತ್ರವಿದ್ದು
(ಅಂದವಾದ) (ಚಂದುಳ್ಳ) ಆಭರಣ ಧೂಪ ದೀಪಗಳಿದ್ದು
ವೃಂದಾವನ ಶ್ರೀ ತುಳಸಿ ಇಲ್ಲದ ಪೂಜೆ ‖ 1 ‖

(ಮಧು ಕ್ಷೀರ ಮೊದಲಾದ ಪಂಚಾಮೃತಗಳಿದ್ದು)
(ದಧಿ ಕ್ಷೀರ ಮೊದಲಾದ ಅಭಿಷೇಕಗಳಿದ್ದು)
ಮಧುಪರ್ಕ ಪಂಚೋಪಚಾರವಿದ್ದು
(ಮಧುಸೂಧನ ಮುದ್ದು ಕೃಷ್ಣನ ಪೂಜೆಗೆ
ಮುದದ ಮೋಹದಳೆಂಬ ತುಳಸಿಯಿಲ್ಲದ ಪೂಜೆ) ‖ 2 ‖
(ಮುದದಿಂದ ಮುದ್ದು ಶ್ರೀ ಕೃಷ್ಣನ ಪೂಜೆಗೆ
ಸದಮಲಳಾದ ಶ್ರೀ ತುಳಸಿ ಇಲ್ಲದ ಪೂಜೆ)

ಮಂತ್ರ ಮಹಾಮಂತ್ರ ಪುರುಷಸೂಕ್ತಗಳಿದ್ದು
ತಂತು ತಪ್ಪದೆ ತಂತ್ರ ಸಾರವಿದ್ದು

ಸಂತತ ಸುಖ ಸಂಪೂರ್ಣನ ಪೂಜೆಗ-
ತ್ಯಂತ ಪ್ರಿಯಳಾದ ತುಳಸಿ ಇಲ್ಲದ ಪೂಜೆ || 3 ||

ಕಮಲ ಮಲ್ಲಿಗೆ ಜಾಜಿ ಸಂಪಿಗೆ ಕೇದಗೆ
ವಿಮಲ ಘಂಟೆ ಪಂಚವಾದ್ಯಗಳಿದ್ದು
ಅಮಲ (ಪಂಚದಿವ್ಯ ಅಮೃತಾನ್ನಗಳಿದ್ದು) (ಪಂಚಭಕ್ಷ್ಯ ಪರಮಾನ್ನಗಳಿದ್ದು)
ಕಮಲನಾಭನು ಶ್ರೀ ತುಳಸಿ ಇಲ್ಲದ ಪೂಜೆ || 4 ||

ಪೂಜೆಯ ಮಾಡದೆ ತುಳಸಿ ಮಂಜರಿಯಿಂದ
ಮೂಜಗದೊಡೆಯ ಮುರಾರಿಯನು
ರಾಜಾಧಿರಾಜನೆಂಬ (ಬಿರುದು ಮಂತ್ರಗಳಿಂದ) (ಮಂತ್ರ ಪುಷ್ಪಗಳಿಂದ)
(ಪೂಜೆ ಮಾಡಿದರೇನು ಪುರಂದರ ವಿಠಲನ) || 5 ||
(ಪೂಜಿಸಿದರು ಒಲ್ಲ ಪುರಂದರ ವಿಠಲನು)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸಿಂಧುಸಾಗರಕೋಟಿ** = ಅನೇಕ ಪವಿತ್ರ ಸಮುದ್ರಗಳು

**ಮಧು** = ಜೇನುತುಪ್ಪ

**ಪಂಚಾಮೃತ** = ಆಕಳ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ

**ಮಧುಪರ್ಕ** = ಮೊಸರು, ತುಪ್ಪ, ಜಲ, ಜೇನುತುಪ್ಪ ಮತ್ತು ಸಕ್ಕರೆ ಇವು ಕೂಡಿದ ಒಂದು ರಸ ದ್ರವ್ಯ. ಇದನ್ನು ಅತಿಥಿಗಳಿಗೆ ಅಥವಾ ಮದುಮಗನಿಗೆ ಕೊಡುತ್ತಾರೆ.

**ಮೋಹದೆ** = ಮನಸ್ಸು ಮೆಚ್ಚಿಸುವವಳು

**ಪಂಚ ವಾದ್ಯ** = ಮದ್ದಳೆ, ಜಾಂಗಟೆ, ತಾಳ, ತಮ್ಮಟೆ, ಭೇರಿ

**ಪಂಚಾದಿವ್ಯ ಅಮೃತಾನ್ನ** = ಭಕ್ಷ್ಯ, ಭೋಜ್ಯ, ಚೋಷ್ಯ, ಲೇಹ್ಯ, ಪೇಯ ಎಂಬ ಐದು ಬಗೆಯ ಆಹಾರಗಳು

**ಮಂತ್ರ** = ವೈದೀಕ ಮಂತ್ರಗಳು

**ಮಹಾಮಂತ್ರ** = 'ಓಂ ನಮೋ ನಾರಾಯಣಯ' ಎಂಬ ಮಂತ್ರ

**ಪುರುಷ ಸೂಕ್ತ** = ಋಗ್ವೇದದ ೧೦ನೆಯ ಮಂಡಲದಲ್ಲಿ ಏಕ ದೈವತ್ವ ವಾದಿಯಾದ ಸೂಕ್ತ

**ತಂತು** = ಎಳೆಯಷ್ಟಾದರೂ

**ತಂತ್ರಸಾರ** = ವೈಷ್ಣವ ಆಚಾರ ವಿಚಾರಗಳನ್ನು ಹೇಳುವುದಕ್ಕಾಗಿ ಶ್ರೀ ಮಧ್ವಾಚಾರ್ಯರು ಪಂಚರಾತ್ರಾಗಮದಿಂದ ಆರಿಸಿ ಸಂಗ್ರಹಿಸಿದ ಗ್ರಂಥ

**ಮಂಜರಿ** = ಗೊಂಚಲು

**Classification:** Keerthane
**Ankita:** purandara vittala
**Location:** NA
**Category:** tulasi song, bhakti
**Sub-Category:** tulasi, Krishna, puje, pushpa, loka, padma, purna, abhisheka, ksheera, abharana, gandha, vastra, sukha, raja,
**Pravachana:** NA
**Explanation:** NA